(II) ಭದ್ರಾ ಜಲಾಶಯದಿಂದ ಬಿಡುತ್ತಿರುವ ನೀರಿನ ಬಗ್ಗೆ

ಶ್ರೀ ಕೆ.ಹೆಚ್. ಶ್ರೀನಿವಾಸ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೆ, ಭದ್ರಾ ಜಲಾಶಯದಿಂದ ಬೆಳೆಗಾಗಿ ಬಿಡುತ್ತಿರುವ ನೀರಿನ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಎಚ್ ಡಿ ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—ಭದ್ರಾ ಜಲಾಶಯದಲ್ಲಿ ಈ ವರ್ಷ ಅಕ್ಟೋಬರ್ ಕೊನೆಯಲ್ಲಿ ಜಲಾಶಯದ ಮಟ್ಟ ೧೬೭ ಅಡಿ ೯ ಅಂಗುಲ ಇದ್ದು ನಿವ್ವಳ ಶೇಖರಣಾ ಪ್ರಮಾಣವು ಕೇವಲ ೨೬.೫೬ ಟಿ.ಎಂ.ಸಿ ಮಾತ್ರ ಇತ್ತು. ಜಲಾಶಯದ ಗರಿಷ್ಟ ಮಟ್ಟ ೧೮೬ ಅಡಿ ಮತ್ತು ಶೇಖರಣೆ ೫೬.೫೫ ಟಿ.ಎಂ.ಸಿ. ೧೯೮೪ ಅಕ್ಟೋಬರ್ ೨೯ರಂದು ಜಲಾಶಯದ ಮಟ್ಟ ೧೮೨ ಅಡಿ ಮತ್ತು ಶೇಖರಣೆ ೪೩ ಟಿಎಂ.ಸಿ ಇತ್ತು. ೧೯೮೬ನೇ ಬೇಸಿಗೆ ಬೆಳೆಗೆ ನೀರು ಬಿಡುವ ವಿಷಯದಲ್ಲಿ ದಿನಾಂಕ ೩೧-೧೦-೧೯೮೫ ರಂದು ಶಿವಮೊಗ್ಗ ಸರ್ಕ್ಯೂಟ್ ಹೌಸ್ ಸಭಾಂಗಣದಲ್ಲಿ ನಡೆದ ಭದ್ರಾ ಯೋಜನೆಯ ಸಮಾಲೋಚನಾ ಸಮಿತಿಯ ಏಳನೇ ಸಭೆಯಲ್ಲಿ ೧೯೮೬ರ ಬೇಸಿಗೆ ಬೆಳೆಗೆ ಈ ಕೆಳಕಂಡ ಬೆಳೆ ಮಾದರಿಯನ್ನು ನಿಗದಿ ಪಡಿಸಲಾಯಿತು.

ಕಬ್ಬು	೨೦,೦೦೦ ಎಕರೆಗಳು	೮,೦೦೦ ಹೆಕ್ಟೇರ್‌ಗಳು
ತೋಟ	೯,೩೦೦ ,,	೩,೭೨೦ ,,
ಅರೆಕಂಷ್ಕಿ	೧,೩೦,೭೦೦	೫೨,೨೮೦ ,,
ಒಟ್ಟು	೧,೬೦,೦೦೦ ಎಕರೆಗಳು	೬೪,೦೦೦ ಹೆಕ್ಟೇರ್‌ಗಳು

ಮುಖ್ಯ ಕಾಲುವೆಗಳಲ್ಲಿ ೧೬ ದಿನಗಳು ನೀರು ಬಿಟ್ಟು ೧೪ ದಿನಗಳು ನಿಲ್ಲಿಸುವ ಅಂತರಿಕ ಸರದಿಯಂತೆಯೂ ಉಪ ಕಾಲುವೆಗಳಲ್ಲಿ ಮೇಲಿನಂತೆ ನೀರು ಬಿಟ್ಟು ದಿನಗಳಲ್ಲಿ ೮ ದಿನಗಳ ಅಂತರಿಕ ಸರದಿಯ ಮೇರೆಗೂ ನೀರನ್ನು ಒದಗಿಸಬಹುದೆಂದೂ ಸಭೆಯಲ್ಲಿ ತಿಳಿಸಿದರು. ಈ ಮೇಲ್ಕಂಡ ಒದಗಿಸುವ ನೀರನ್ನು ೩ ಪಾರಕ್ಕೊಮ್ಮೆ ಮಾತ್ರ ಪ್ರತೀ ಪ್ರಕಟಿತ ಬೆಳೆಗಳಿಗೆ ನೀರು ಒದಗಿಸಬಹುದೆಂದೂ ಸಭೆಯಲ್ಲಿ ಸೂಚಿಸಲಾಯಿತು. ಸದರಿ ವಿಷಯದಲ್ಲಿ ಸಮಿತಿಯ ಸದಸ್ಯರೂ ಹಾಗೂ ಆಹ್ವಾನಿತರೂ ಆಯಾಯ ಕ್ಷೇತ್ರದ ಅಚ್ಚುಕಟ್ಟುದಾರರಿಗೆ ಸೂಕ್ತ ತಿಳುವಳಿಕೆ ನೀಡಿ ಬೆಳೆ ಮಾದರಿಗಳಲ್ಲಿ ಅಂತರಿಕ ಸರದಿಯನ್ನು ಕಟ್ಟುನಿಟ್ಟಾಗಿ ಪಾಲಿಸಿ ಇಲಾಖೆಯವರೊಂದಿಗೆ ಸಹಕರಿಸಬೇಕೆಂದು ತಿಳಿಯಪಡಿಸಿ ಸಭೆಯನ್ನು ಆಡಳಿತಾಧಿಕಾರಿಗಳು ಕೋರಿದರು.

ನೀರನ್ನು ೧-೧-೮೬ ರಂದು ಬಲದಂಡೆ ಹಾಗೂ ಎಡದಂಡೆ ಮುಖ್ಯ ಕಾಲುವೆಗಳಲ್ಲಿ ಬಿಡಲಾಯಿತು ದಾವಣಗೆರೆ ಹರಿಹರ ಹಾಗೂ ತರೀಕೆರೆ ತಾಲ್ಲೂಕಿನ ರೈತರು ಭದ್ರಾ ಪ್ರೊಜೆಕ್ಟ್‌ಗೆ ೧೪-೧-೮೬ ರಂದು ಜಾತಾ ಬಂದು ನೀರನ್ನು ಸತತವಾಗಿ ಬಿಡಬೇಕೆಂದು ಕೇಳಿಕೊಂಡರು. ೧೫-೨-೧೯೮೬ ರಂದು ಆದ ಚರ್ಚೆಯ ಸಮಯದಲ್ಲಿ ಭದ್ರಾಕಾಡಾ ಚೇರ್ಮನ್‌ರ ಜೊತೆಗೆ (೧) ಶ್ರೀ ಟಿ.ವಿ. ಚಂದ್ರಶೇಖರಪ್ಪ, ಎಂ.ಪಿ (೨) ಶ್ರೀ ನೀಲಕಂಠಪ್ಪ ಎಂ.ಎಲ್ ಎ. ತರೀಕೆರೆ (೩) ಶ್ರೀ ನರಸಿಂಹಪ್ಪ. ರೈತ ನಾಯಕರೂ ಹಾಗೂ ಇತರರೂ ಉಪಸ್ಥಿತರಿದ್ದರು. ಇವರೆಲ್ಲರ ಜೊತೆ ಪೂರ್ಣ ಚರ್ಚೆಯಾದೊಡನೆ. ರೈತ ನಾಯಕರು ನೀರನ್ನು ೧೪ ದಿನ ಬಿಟ್ಟು ೮ ದಿನ ನಿಲ್ಲಿಸುವ ಅಂತರಿಕ ಸರದಿಯೊಡನೆಯೂ ಹಾಗೂ ನೀರನ್ನು ೩೦-೪-೧೯೮೬ ರಂದು ನಿಲ್ಲಿಸುವ ಬದಲು ೧-೫-೧೯೮೬ರ ತನಕ ಮುಂದುವರಿಸಬೇಕೆಂದು ಕೇಳಿಕೊಂಡರು. ಭದ್ರಾ ಚೇರ್ಮನರವರು ಇದಕ್ಕೆ ... ರವಾಗಿ, ಭದ್ರಾ ಯೋಜನೆಯ ಸಮಾಲೋಚನಾ ಸಮಿತಿಯೇ ಇವರ ಬಗ್ಗೆ ನಿರ್ಧಾರ ಕೈಗೊಳ್ಳ...ಕಾಗಿರುವುದರಿಂದ ಸಮಿತಿಯ ಸಭೆಯನ್ನು ತುರ್ತಾಗಿ ಕರೆಯುತ್ತೇವೆ ಎಂದು ಹೇಳಿದರು ರೈತರೂ ಕೂಡ ಇದಕ್ಕೆ ಒಪ್ಪಿದರು.

ರೈತ ನಾಯಕರು ನೀರನ್ನು ೧-೨-೧೯೮೬ರ ಬದಲು ೨೮-೧-೧೯೮೬ಕ್ಕೆ ಬೆಳೆದು ನಿಂತಿರುವ ಬೆಳೆಗೆ ಬಿಡಬೇಕೆಂದು ಕೇಳಿಕೊಂಡರು. ಅದಕ್ಕೆ ಭದ್ರಾ ಚೇರ್ಮನ್ನರು ೨೮-೧-೧೯೮೬ಕ್ಕೆ ನೀರು ಬಿಡಲು ನಿರ್ದೇಶನ ಇತ್ತಿದ್ದಾರೆ. ಹಾಗೂ ಈ ತರಹ ಕ್ರಮವನ್ನು ಕೈಗೊಳ್ಳಲಾಗುವುದು.

ಭದ್ರಾ ಸಮಾಲೋಚನೆ ಸಮಿತಿಯ ಸೆಕ್ರೆಟರಿಯವರನ್ನು ಕೂಡಲೇ ಕಾಡಾ ಚೇರ್ಮನ್‌ರವರೊಡನೆ ಚರ್ಚಿಸಿ ಒಂದು ತುರ್ತು ಸಭೆಯನ್ನು ಕರೆಯಲು ಕೇಳಿಕೊಳ್ಳಲಾಗಿದೆ.

೧೯೮೫ರ ಬೇಸಿಗೆಯಲ್ಲಿ ೬೬೨೯ ಹೆಕ್ಟೇರ್ ಕಬ್ಬು, ೪೮೧೧೯ ಹೆಕ್ಟೇರ್ ಭತ್ತ, ೨೪೯೮ ಹೆಕ್ಟೇರ್ ತೋಟ ಮತ್ತು ೨೦೦೮೩ ಹೆಕ್ಟೇರ್ ಅರೆಕುಷ್ಕಿ ಅಂದರೆ ಒಟ್ಟು ೭೭೫೦೦ ಹೆಕ್ಟೇರ್ ಬೆಳೆ ತೆಗೆಯಲಾಯಿತು.

ಶ್ರೀ ಕೆ. ಎಚ್. ಶ್ರೀನಿವಾಸ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೆಲವೊಂದು ವಿವರಗಳನ್ನು ಒದಗಿಸಿದ್ದಾರೆ. ರೈತ ಸಮುದಾಯದಿಂದ ಬಂದಿರುವಂಥ ಕೆಲವು ಅನುಮಾನಗಳನ್ನು ಪ್ರಸ್ತಾಪ ಮಾಡಿ ಅದರ ಬಗ್ಗೆ ವಿವರಗಳನ್ನು ಕೇಳುವುದಕ್ಕೆ ಬಯಸುತ್ತೇನೆ. ಹಿಂದೆ ಅಣೆಕಟ್ಟಿನಲ್ಲಿ ೧೫೭ ಅಡಿ ನೀರು ಇದ್ದಾಗ ವಾರಕ್ಕೆ ಒಂದು ಸಾರಿ ನೀರನ್ನು ಬಿಡುತ್ತಿದ್ದರು. ಈಗ ಅಣೆಕಟ್ಟಿನಲ್ಲಿ ೧೬೧ ಅಡಿ ನೀರು ಇರುವಾಗ ತಿಂಗಳಿಗೆ ಒಂದು ಸಾರಿ ನೀರು ಬಿಡತಕ್ಕ ತೀರ್ಮಾನವನ್ನು ದಿನಾಂಕ ೩೧-೧೦-೧೯೮೫ರಲ್ಲಿ ತೆಗೆದುಕೊಂಡಿದ್ದಾರೆ. ಇವರ ಪ್ರಕಾರ ಈಗ ಅಚ್ಚುಕಟ್ಟಿನಲ್ಲಿರತಕ್ಕ ಎಲ್ಲಾ ಬೆಳೆಗಳು ಏನಾಗುತ್ತವೆ ? ಅಚ್ಚುಕಟ್ಟಿನಲ್ಲಿ ಭತ್ತ ಎಷ್ಟಿದೆ ಎಂಬುದನ್ನು ಹೇಳಿಲ್ಲ, ಅಚ್ಚುಕಟ್ಟಿನಲ್ಲಿ ಬೆಳೆದಿರತಕ್ಕ ಭತ್ತ, ರಾಗಿ, ಇನ್ನಿತರ ಬೆಳೆಗಳು ಈಗ ಅವರು ತೆಗೆದುಕೊಂಡಿರತಕ್ಕ ತೀರ್ಮಾನದಿಂದ ಸಂಪೂರ್ಣವಾಗಿ ಒಣಗಿ ಬೆಳೆ ನಾಶವಾಗುತ್ತವೆ ಎನ್ನುವ ಭಯ ರೈತರಲ್ಲಿ ಸಹಜವಾಗಿ ಬಂದಿದೆ. ಅಚ್ಚುಕಟ್ಟು ಪ್ರದೇಶದಲ್ಲಿ ಯಾವ ಯಾವ ಬೆಳೆಗಳು ಇವೆ ಎನ್ನುವುದು ನನಗೆ ಬೇಕಾಗಿಲ್ಲ. ಬೆಳೆದು ನಿಂತಿರತಕ್ಕ ಬೆಳೆ ಭತ್ತ, ರಾಗಿ ಮತ್ತು ಕಬ್ಬು ಎಷ್ಟು ಹೆಕ್ಟೇರುಗಳಲ್ಲಿವೆ ಎಂಬುದು ತಮಗೆ ಗೊತ್ತಿದೆ. ಈ ಎಲ್ಲಾ ಬೆಳೆಗಳನ್ನು ರಕ್ಷಣೆ ಮಾಡುವುದಕ್ಕೆ ಜಲಾಶಯದಲ್ಲಿ ನೀರು ಇದೆಯೋ ಇಲ್ಲವೊ ? ಜಲಾಶಯದಲ್ಲಿ ಹಿಂದೆ ೧೫೭ ಅಡಿ ನೀರು ಇದ್ದಾಗ ವಾರಕ್ಕೆ ಒಂದು ಸಾರಿ ನೀರು ಬಿಡುವುದಕ್ಕೆ ಸಾಧ್ಯವಿರುವಾಗ, ೧೬೧ ಅಡಿ ನೀರು ಇರುವಾಗ ನೀರನ್ನು ಬಿಡದೆ ಇರುವುದಕ್ಕೆ ಕಾರಣ ಏನು ? ಏತಕ್ಕೋಸ್ಕರ ಈ ರೀತಿ ಮಾಡುತ್ತೀರಿ ? ಇದರಿಂದ ದೊಡ್ಡ ದೊಡ್ಡ ಪ್ರಮಾಣದ ಪ್ರಚಾರ ಸಿಗಲಿ ಎಂದು ಈ ರೀತಿ ಮಾಡಿದ್ದೀರಾ ಹಾಗೇನಾದರೂ ಇದ್ದರೆ ಹೇಳಿ ಬಹಳ ಸಂತೋಷ. ಈ ವರ್ಷ ಮಳೆಗಾಲದಲ್ಲಿ ನೀರನ್ನು ಶೇಖರಿಸಿ ಸ್ವಲ್ಪ ಭಾಗವನ್ನು ಆಂಧ್ರ ಪ್ರದೇಶಕ್ಕೆ ಭದ್ರಾ ಜಲಾಶಯದಿಂದ ಬಿಟ್ಟಿದ್ದೀರಿ. ಸಂದರ್ಭಾನುಸಾರವಾಗಿ ನೀವು ನೀರನ್ನು ಒದಗಿಸಿ ಇಲ್ಲಿರತಕ್ಕ ಬೆಳೆಗಳಿಗೆ ನೀರನ್ನು ಕೊಡುತ್ತಿಲ್ಲವೆನ್ನುವ ಭಾವನೆ ಬಂದಿದೆ, ಇದರ ಬಗ್ಗೆ ಸತ್ಯಾಸತ್ಯತೆಯನ್ನು ನೀವು ಹೇಳಬೇಕು. ತಾವು ಏನೇ ಹೇಳಿ ನಮಗೆ ಲಭಿಸಿರುವ ಅಂಕಿಸಂಖ್ಯೆಗಳ ಪ್ರಕಾರ ಯಾವುದೇ ರೀತಿಯ ಸಮರ್ಥನೆ ಇಲ್ಲ. ಒಂದು ದೃಷ್ಟಿಯಿಂದ ದಯವಿಟ್ಟು ತಾವು ಈ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ತಾವು ಕೆಲವು ಸಭೆಗಳಲ್ಲಿ ಈ ಸರ್ಕಾರದ ನೀತಿಗೆ ಒಪ್ಪಿಗೆ ಆಗಿವೆಯೆಂದು ಹೇಳಿದ್ದೀರಿ. ಕಾಡಾ ಅಧ್ಯಕ್ಷರು ನಾವು ಯಾವುದನ್ನೂ ಒಪ್ಪಿಕೊಂಡಿಲ್ಲ, ಇದು ಮುಂದಿನ ಸಭೆಯಲ್ಲಿ ತೀರ್ಮಾನವಾಗುತ್ತದೆ ಎನ್ನುವ ಹೇಳಿಕೆಯನ್ನು ಹಿಂದೂ ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಅದು ಈ ರೀತಿ ಇದೆ,

> "Announcing this at a Press Conference here on Monday, Mr. Lakshman, CADA Chairman made it clear that there was no such agreement."

ಯಾವುದರ ಬಗ್ಗೆ ಯಾವ ಅಗ್ರಿಮೆಂಟ್ ಆಗಿಲ್ಲ, ನಾವು ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳುವುದು ಇದ್ದರೆ ಮುಂದಿನ ಸಭೆಯಲ್ಲಿ ತೆಗೆದುಕೊಳ್ಳುತ್ತೇವೆಂದು ಅವರು ಹೇಳಿದ್ದಾರೆ. ತುರ್ತುಸಭೆಯನ್ನು ಫೆಬ್ರುವರಿ ೧೪ಕ್ಕೆ ಕರೆಯುತ್ತೇವೆಂದು ಹೇಳಿದ್ದಾರೆ. ತುರ್ತುಸಭೆ ಎಂದರೆ ತಿಂಗಳಿಗೊಂದು ಸಾರಿ ಕರೆಯುತ್ತಾರೆಯೆ ? ಈಗಾಗಲೇ ಸಾಕಷ್ಟು ಬೆಳೆಗಳು ಒಣಗಿವೆ. ಫೆಬ್ರುವರಿ ೧೪ಕ್ಕೆ ಸಭೆಯನ್ನು ಕರೆದರೆ ತುಂಬಾ ತಡವಾಗುತ್ತದೆ. ತುರ್ತುಸಭೆ ಎಂದರೆ ೭-೮ ದಿವಸಗಳಲ್ಲಿ ಕರೆಯಬೇಕು. ಯಾವತ್ತು ಸಭೆ ಕರೆಯುತ್ತೀರಿ ಎಂದು ಹೇಳಬೇಕು ? ಇವತ್ತು ತೀರ್ಮಾನ ಮಾಡುತ್ತೇನೆಂದು ಹೇಳಿ ಒಂದು ತಿಂಗಳು ಆದ ಮೇಲೆ ಸಭೆಯನ್ನು ಕರೆದರೆ ಅದು ತುರ್ತು ಸಭೆ ಹೇಗೆ ಆಗುತ್ತದೆ ? ಈಗ ಇರುವಂತಹ ಬೆಳೆಯನ್ನು ಎಷ್ಟು ಪ್ರಮಾಣದಲ್ಲಿ ರಕ್ಷಣೆ ಮಾಡುವುದಕ್ಕೆ ಸಾಧ್ಯವಿದೆ ? ನೀರು ಇಲ್ಲದಿದ್ದರೆ ರಕ್ಷಣೆ ಮಾಡಿ ಎಂದು ಹೇಳುವುದಕ್ಕಾಗುವುದಿಲ್ಲ. ಒಂದೊಂದು ಸಾರಿ ಅಧಿಕಾರಿಗೂ ಅನಾವಶ್ಯಕವಾಗಿ by way of abundant caution ಜಲಾಶಯದಲ್ಲಿ ನೀರನ್ನು ಇಟ್ಟುಕೊಳ್ಳುವಂಥದ್ದು ಇದೆ.

ಅಧ್ಯಕ್ಷರು.—ವಿವರಣೆಯನ್ನು ಕೇಳಿ ಎಂದರೆ ಭಾಷಣ ಮಾಡುತ್ತಿದ್ದೀರಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ವಿವರಣೆಯನ್ನೇ ನಾನು ಕೇಳುತ್ತಿದ್ದೇನೆ. ನಾನು ಮಧ್ಯೆ ಮಧ್ಯೆ ಎದ್ದು ನಿಂತು ಮಾತನಾಡಬಾರದು ಎಂಬುದಾಗಿ ತಿಳಿದುಕೊಂಡು ಎಲ್ಲವನ್ನೂ ಒಂದೇ ಸಾರಿ ಹೇಳಿಬಿಡುತ್ತೇನೆ. ನಾನೂ ೩-೪ ಸಾರಿ ಎದ್ದೆದ್ದು ಮಾತನಾಡಿದರೆ ಅದು ನಿಮಗೂ ಗೊತ್ತಾಗುವುದಿಲ್ಲ

ಇದರಲ್ಲಿ ಭತ್ತದ ಬೆಳೆ ಏನಿದೆ ಅದನ್ನು ರಕ್ಷಣೆ ಮಾಡುವುದಕ್ಕೆ ತಕ್ಷಣವೇ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಸನ್ಮಾನ್ಯ ಸದಸ್ಯರಾದ ಶ್ರೀ ಕೆ. ಎಚ್. ಶ್ರೀನಿವಾಸ್‌ರವರು ಕೆಲವು ವಿವರಗಳನ್ನು ಕೇಳಿದ್ದಾರೆ. ಅವರು ಕೇಳಿರುವಂತಹ ವಿವರಗಳನ್ನು ನಾನು ಈಗಾಗಲೇ ನನ್ನ ಹೇಳಿಕೆಯಲ್ಲಿ ಕೊಟ್ಟಿದ್ದೇನೆ. ಪ್ರಮುಖವಾಗಿ ಹೇಳಿರುವಂತಹ ವಿಷಯ ಜಲಾಶಯದಲ್ಲಿ ೧೫೫ ಅಡಿ ನೀರು ಇದ್ದಾಗಲೂ ಹಿಂದೆ ಎಲ್ಲಾ ಪ್ರದೇಶಗಳಿಗೂ ನೀರನ್ನು ಕೊಡುವುದಕ್ಕೆ ಸಾಧ್ಯವಾಗಿತ್ತು, ಇಂದು ೧೬೩ ಅಡಿ ನೀರು ಜಲಾಶಯದಲ್ಲಿದ್ದರೂ ನೀರನ್ನು ಕೊಡುವುದಕ್ಕೆ ಏಕೆ ಸಾಧ್ಯವಾಗಿಲ್ಲ ಎನ್ನುವ ಸಂಶಯವನ್ನು ಅವರು ವ್ಯಕ್ತ ಮಾಡಿದ್ದಾರೆ. ಮಾನ್ಯ ಸದಸ್ಯರಿಗೂ ತಿಳಿದಿರುವಂತೆ ಪ್ರತಿ ವರ್ಷವೂ ಜಲಾಶಯಕ್ಕೆ ಹೂಳು ತುಂಬಿಕೊಂಡು ಜಲಾಶಯದಲ್ಲಿ ನೀರಿನ ಸಂಗ್ರಹಣೆ ಗಾತ್ರ ಕೂಡ ಕಡಿಮೆಯಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ಎರಡನೆಯದಾಗಿ ಆಂಧ್ರಕ್ಕೆ ನೀರನ್ನು ಬಿಟ್ಟಿರತಕ್ಕಂಥದ್ದು ಈ ವರ್ಷ ಅಲ್ಲ. ಹೋದ ವರ್ಷ ಎಂದರೆ ೧೯೮೪ರಲ್ಲಿ ೨ ಟಿ.ಎಂ.ಸಿ. ಎಫ್.ಟಿ. ನೀರನ್ನು ತುಂಗಭದ್ರಾಕ್ಕೆ ಬಿಟ್ಟಿದ್ದೆವು. ಕಾರಣ ತುಂಗಭದ್ರಾ ಜಲಾಶಯದ ಹಿಂಭಾಗದಲ್ಲಿರುವ ಬೆಳೆಯನ್ನು ಉಳಿಸಿಕೊಳ್ಳುವ ಸಲುವಾಗಿ, ರೈತರನ್ನು ರಕ್ಷಣೆ ಮಾಡುವ ಸಲುವಾಗಿ ೨ ಟಿ.ಎಂ.ಸಿ. ಎಫ್.ಟಿ. ನೀರನ್ನು ಬಿಟ್ಟಿದ್ದುದು ಸಹಜ. ಈ ನೀರನ್ನು ಆಂಧ್ರಕ್ಕೆ ಕೊಡುವಂತಹ ಪ್ರಶ್ನೆಯೇ ಇಲ್ಲ. ಏನು ಈಗಾಗಲೇ ಕಾಡಾ ಸಮಿತಿಯವರು ಮೀಟ್ ಮಾಡಿ ನಿರ್ಣಯವನ್ನು ಮಾಡಿಕೊಂಡಿದ್ದಾರೆ. ಆ ನಿರ್ಣಯದ ಪ್ರಕಾರ ೨೦ ಸಾವಿರ ಎಕರೆ ಕಬ್ಬಿನ ಬೆಳೆಗೆ ನೀರನ್ನು ಕೊಡಬೇಕು, ೯,೩೦೦ ಎಕರೆಯಲ್ಲಿರುವಂತಹ ತೋಟದ ಬೆಳೆಗೆ ನೀರನ್ನು ಕೊಡಬೇಕು. ಹಾಗೂ ೧,೩೦,೭೦೦ ಎಕರೆಯಲ್ಲಿರುವ ಅರೆ ಖುಷ್ಕಿ ಬೆಳೆಗೆ ನೀರನ್ನು ಕೊಡಬೇಕೆಂದು ಏನು ನಿರ್ಣಯ ಮಾಡಿದ್ದಾರೆ ಅದಕ್ಕೆ ಬದ್ಧರಿದ್ದೇವೆ ಈಗ ಅಲ್ಲಿರತಕ್ಕಂತಹ ನೀರನ್ನು ಎಷ್ಟು ಪ್ರದೇಶಗಳಿಗೆ ಬಿಡಬೇಕೆಂಬುದನ್ನು ಸಮಿತಿಯ ಸಭೆಯಲ್ಲಿ ಆದಂತಹ ತೀರ್ಮಾನದ ಮೇಲೆ ಏನು Off and On System ಪ್ರಕಾರ, ಆ ಒಂದು ಆಧಾರದ ಮೇಲೆ ಅಷ್ಟಕ್ಕೂ ನೀರನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಂಬುದು ನಮ್ಮ ಇಲಾಖೆಯ ಅಭಿಪ್ರಾಯ ಮತ್ತು ಕಾಡಾದವರ ಅಭಿಪ್ರಾಯವೆಂಬುದನ್ನು ನಾನು ಮತ್ತೊಮ್ಮೆ ತಮಗೆ ವಿವರಣೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ ಅದೇ ರೀತಿ ಶ್ರೀಮಾನ್ ಶ್ರೀನಿವಾಸ್‌ರವರು ಕಾಡಾ ಛೇರ್ಮನ್‌ನವರ ಪತ್ರಿಕಾ ಹೇಳಿಕೆಯನ್ನು ಸಭೆಯ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ. ರೈತರ ಮುಂದಾಳಾದಂತಹ ಶ್ರೀಮಾನ್ ನರಸಿಂಹಪ್ಪನವರು ರಾಜಕೀಯ ಮುಂದಾಳೂ ಕೂಡ ಹೌದು. ಇದನ್ನು ನಾನು ಅಷ್ಟಕ್ಕೆ ಬಿಡುತ್ತೇನೆ. ಇನ್ನು ಮುಂದೆ ಹೋಗುವುದಿಲ್ಲ. ಅವರೇ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. "Decision on water release for summer Crops under Bhadra" ಎಂಬ ತೀರ್ಮಾನವನ್ನು ನಮ್ಮ ಕಾಡಾದ ಅಧ್ಯಕ್ಷರು ಕೊಟ್ಟರು. "Water restriction ; Bhadra command area ryots win their point" This is a statement made by Sri Narasimhappa, Ryot leader-cum-Politician. ಇದನ್ನು ಮಾನ್ಯ ಶ್ರೀನಿವಾಸ್‌ರವರ ಗಮನಕ್ಕೆ ತರುತ್ತೇನೆ. ವಾಟರ್ ರಿಸ್ಟ್ರಿಕ್ಷನ್ ವಿನ್ ದೇರ್ ಪಾಯಿಂಟ್ Bhadra Command area ryots win their Point" ಅದಕ್ಕೆ ಅವರು ಆ ರೀತಿಯ ವಿವರಣೆಯನ್ನು ಕೊಟ್ಟಿದ್ದಾರೆ. ಮತ್ತೇನೂ ಇಲ್ಲ. ನಾನು ಇನ್ನೂ ಮುಂದೆ ಹೋಗುವುದಿಲ್ಲ.

SRI K. H. SRINIVAS.—Really that is the point that they have not won their point.

ಶ್ರೀ ಎಚ್. ಡಿ. ದೇವೇಗೌಡ.—ನಾನು ಈ ಇಷ್ಟೇ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿರತಕ್ಕ ನೀರನ್ನು ಎಷ್ಟು ಎಚ್ಚರಿಕೆಯಿಂದ ಉಪಯೋಗ ಮಾಡಿದರೆ, ಅಲ್ಲಿರತಕ್ಕ ಎಷ್ಟು ಬೆಳೆಗಳಿಗೆ ನೀರನ್ನು ಕೊಡುವುದಕ್ಕೆ ಸಾಧ್ಯ ಎಂಬುದರ ಬಗ್ಗೆ ಸರ್ಕಾರ ತೀವ್ರವಾಗಿ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಫೆಬ್ರವರಿ ೧೫ನೇ ತಾರೀಖು ಕಾಡಾದ ಅಧ್ಯಕ್ಷರ ಸಭೆಯನ್ನು ಕರೆಯುತ್ತೇನೆಂದು ಪತ್ರಿಕಾ ಹೇಳಿಕೆ ಕೊಟ್ಟಿರುವುದರ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ಅವಶ್ಯಕ ಬಿದ್ದರೆ ಇಲ್ಲೇ ಸಭೆಯನ್ನು ಕರೆಯೋಣ. ಹೇಗೂ ಶಾಸನ ಸಭೆ ನಡೆಯುತ್ತಿದೆ, ಜಿಲ್ಲಾ ಮಂತ್ರಿಗಳೂ ಇದ್ದಾರೆ, ನಮ್ಮ

ಶಾಸಕರೂ ಇದ್ದಾರೆ, ಮಾನ್ಯ ಶಾಸಕರಾದ ಶ್ರೀನಿವಾಸ್‌ರವರೂ ಇದ್ದಾರೆ, ಆ ಸಭೆಗೆ ಕಾಡಾದ ಅಧ್ಯಕ್ಷರನ್ನು, ಅಧಿಕಾರಿಗಳನ್ನು ಕರೆಯುತ್ತೇನೆ. ಬೇಕಾದರೆ ಆ ಸಭೆಗೆ ರೈತರ ಪ್ರತಿನಿಧಿಗಳನ್ನೂ ಕರೆಯುತ್ತೇನೆ. ಅಂದರೆ ಇದಕ್ಕಾಗಿ ದೊಡ್ಡ ಜಾತಾ ಬರಬೇಕಾದ ಅವಶ್ಯಕತೆ ಇಲ್ಲ. ಏಕೆಂದರೆ ಈ ಸರ್ಕಾರ ಇರುವುದೇ ರೈತರಿಗೋಸ್ಕರ. ಕೆಲವರ ಹೆಸರುಗಳನ್ನು ಮಾನ್ಯ ಸದಸ್ಯರೇ ಸೂಚಿಸಲಿ ಅವರನ್ನೂ ಸಭೆಗೆ ಕರೆಯುತ್ತೇನೆ ಚರ್ಚೆ ಮಾಡೋಣ. ರೈತರಿಗೆ ಉತ್ತಮವಾದ ಅನುಕೂಲವನ್ನು ಮಾಡಿಕೊಡೋಣ ಎಂಬುದನ್ನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ.

ವರದಿಯ ಮಂಡನೆ

ಶ್ರೀ ರಮೇಶ್‌ಕುಮಾರ್.—ಮಾನ್ಯ ಅಧ್ಯಕ್ಷರೆ,

"ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ೧೯೭೯–೮೦ರಿಂದ ೧೯೮೨–೮೩ರವರೆಗಿನ ಹಣ ವಿನಿಯೋಗ ಮತ್ತು ವಿತ್ತೀಯ ಲೆಕ್ಕ ಪತ್ರಗಳ ಮೇಲಿನ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಮಹಾ ಲೇಖಾ ಪರೀಕ್ಷಕರ ವರದಿಯ (ಸಿವಿಲ್ ಹಾಗೂ ಕಂದಾಯ) ಮೇಲಿನ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ೮ನೇ ವರದಿಯನ್ನು ಸದನದ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಸದನದ ಮುಂದೆ ಮಂಡನೆ ಮಾಡಲಾಗಿದೆ.

ನಿಯಮ ೩೩೪ರ ಮೇರೆಗೆ

ಭ್ರಷ್ಟಾಚಾರ ಹಾಗೂ ಲಂಚಗುಳಿತನಕ್ಕೆ ಕಾರಣರಾದ ಸುಳ್ಯ ಪೋಲೀಸ್ ಠಾಣೆಯ ಪೋಲೀಸ್ ಕಾನ್‌ಸ್ಟೇಬಲ್‌ಗಳ ಮೇಲೆ ಕ್ರಮ ಕೈಗೊಳ್ಳುವುದು:

ಶ್ರೀ ಕೆ. ಕುಶಾಲ.—ಸುಳ್ಯ ಪೋಲೀಸ್ ಠಾಣೆಯಲ್ಲಿರುವ ಪೋಲೀಸು ಕಾನ್ಸ್‌ಟೇಬಲ್‌ಗಳಿಬ್ಬರು ಕೆಲವು ವರ್ಷಗಳಿಂದ ಆ ಸ್ಟೇಷನ್ನಿನಲ್ಲಿ ಇದ್ದುಕೊಂಡು ಸುಳ್ಯ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆಯುವ ಭ್ರಷ್ಟಾಚಾರ, ಲಂಚಗುಳಿತನದ ಸೂತ್ರಧಾರಿಗಳು ಎಂದು ದಿನ ಪತ್ರಿಕೆಯಲ್ಲಿ ಸಾರ್ವಜನಿಕರು ಹಾಗೂ ಪೋಲೀಸು ಇಲಾಖೆಯವರು ಹೇಳಿಕೆ ನೀಡಿದ್ದರೂ ಈ ತನಕ ಆ ಕಾನ್ಸ್‌ಟೇಬಲ್‌ಗಳ ಮೇಲೆ ಸರ್ಕಾರ ಕ್ರಮ ಕೈಕೊಳ್ಳದೆ ಇರಲು ಕಾರಣವೇನು, ಇನ್ನಾದರೂ ಕ್ರಮ ಕೈಕೊಳ್ಳುವರೆ ?

ಶ್ರೀ ಎ. ಲಕ್ಷ್ಮೀಸಾಗರ್.—ಪತ್ರಿಕೆಗಳಲ್ಲಿ ವರದಿ ಬಂದಿದೆ, ಆ ಒಂದು ಆಧಾರದ ಮೇಲೆ ಅವರು ಮಾಡಬಾರದ ಕೆಲಸವನ್ನು ಮಾಡಿದ್ದಾರೆ, ಅವರನ್ನು ಅಲ್ಲಿಂದ ವರ್ಗಾವಣೆಯನ್ನು ಮಾಡಿ ಎಂಬುದಾಗಿ ಹೇಳುತ್ತಿದ್ದಾರೆ ಮಾನ್ಯ ಸದಸ್ಯರು. ಆ ವಿಚಾರವನ್ನು ನಾನು ಮಂತ್ರಿಗಳ ಗಮನಕ್ಕೆ ತಿಳಿಸುತ್ತೇನೆ. ಜೊತೆಗೆ ಈ ವಿಚಾರದಲ್ಲಿ ಅವರದ್ದೇನಾದರೂ ಆಪಾದನೆ ಇದ್ದರೆ, ಸನ್ಮಾನ್ಯ ಸದಸ್ಯರು ಲಿಖಿತ ಮೂಲಕ ಕೊಟ್ಟರೆ ಅದನ್ನು ವಿಚಾರ ಮಾಡತಕ್ಕಂತಹ ಕೆಲಸವನ್ನು ಸರ್ಕಾರ ಮಾಡುತ್ತದೆಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಭೂನ್ಯಾಯ ಮಂಡಲಿಗಳ ಪ್ರಕರಣಗಳನ್ನು ಇತ್ಯರ್ಥಗೊಳಿಸುವುದು.

ಶ್ರೀ ಬಿ. ಎ. ಇದಿನಬ್ಬ.—ದಕ್ಷಿಣ ಕನ್ನಡ ಜಿಲ್ಲೆಯ ಭೂ ನ್ಯಾಯ ಮಂಡಳಿಗಳ ಸ್ಪೆಷಲ್ ತಹಸೀಲ್ದಾರ್ ಮತ್ತು ಸಿಬ್ಬಂದಿಯವರು ಪ್ರಕರಣಗಳ ಫೈಲುಗಳನ್ನು ವಿಂಗಡಿಸಿ ನೋಟೀಸು ಕೊಡ್‌ವವರಿಗೆ ನೋಟೀಸು ಕೊಟ್ಟು ಫೈಲುಗಳ ಇತ್ಯರ್ಥಕ್ಕೆ ಭೂ ನ್ಯಾಯ ಮಂಡಳಿಗಳಿಗೆ ಒದಗಿಸುವುದು ನಿಧಾನಗತಿಯಲ್ಲಿದೆ ಎಂಬ ದೂರುಗಳಿವೆ. ಆಂತಿರುವಾಗ ಶೀಘ್ರ ಫೈಲು ಒದಗಿಸುವಂತೆ ಮಾಡಬೇಕು ಇನ್ನು ಭೂ ನ್ಯಾಯ ಮಂಡಳಿಗಳಿಗೆ ಸ್ವಂತ ಜೀಪು ಇಲ್ಲದಿರುವುದರಿಂದ ಸ್ಥಳ ತನಿಖೆಯಂತಹ ಪ್ರಾಮುಖ್ಯ ಕೆಲಸಕ್ಕೆ ತಹಸೀಲ್ದಾರ್‌ರವರು ಬಿ.ಡಿ.ಓ. ರವರ ಜೀಪು ಸಿಗುವುದನ್ನೇ ಕಾಯಬೇಕಾಗಿರುತ್ತದೆ. ಆದ